**OS. No.18/2016**
**D.W-2**

**( ದಿನಾಂಕ.17-12-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ** ಶ್ರೀ. G.A.D ವಕೀಲರಿಂದ

ವಾದಿಯರ ತಂದೆಯಾದ ಹಣಮಂತರಾವರಿಗೆ ಎಷ್ಟು ಎಕರೆ ಜಮೀನು ಇತ್ತು ಎಂದು ನಾನು ಪಹಣಿ ನೋಡಿಲ್ಲ. ಆದರೆ 100 ಎಕರೆ ಮೇಲೆ ಇತ್ತು. 100 ಎಕರೆ ಮೇಲೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ, ಸಾಕ್ಷಿ ಎಷ್ಟು ಎಕರೆ ಇದೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಕಮಲಾಕರ ತಂದೆ ಶಿವಲಿಂಗಪ್ಪ ಇರದೆರವರಿಗೆ ಯಾರು ಜಮೀನು ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಯಾವ ಸರ್ವೇ ನಂಬರ ಮತ್ತು ಎಷ್ಟು ಎಕರೆ ಹಾಗೂ ಯಾರು ಮಾರಾಟ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ಅದೇ ರೀತಿ ಅಂಬಾರಾಯ ತಂದೆ ಶಿವಲಿಂಗಪ್ಪ ಇರದೆರವರಿಗೆ ಯಾವ ಸರ್ವೇ ನಂಬರ ಮತ್ತು ಎಷ್ಟು ಎಕರೆ ಹಾಗೂ ಯಾರು ಮಾರಾಟ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ಅದೇ ರೀತಿ ಅಹಮ್ಮದ ಅಲಿ ತಂದೆ ಮಕಬೂಲ ಸಾಬ ಶೇಖರವರಿಗೆ ಯಾವ ಸರ್ವೇ ನಂಬರ ಮತ್ತು ಎಷ್ಟು ಎಕರೆ ಹಾಗೂ ಯಾರು ಮಾರಾಟ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ಅದೇ ರೀತಿ ಶಿವಶರಣಪ್ಪ ವಾಡಿರವರಿಗೆ ಯಾವ ಸರ್ವೇ ನಂಬರ ಮತ್ತು ಎಷ್ಟು ಎಕರೆ ಹಾಗೂ ಯಾರು ಮಾರಾಟ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ಅದೇ ರೀತಿ ಗುರುನಾಥ ರೆಡ್ಡಿರವರಿಗೆ ಯಾವ ಸರ್ವೇ ನಂಬರ ಮತ್ತು ಎಷ್ಟು ಎಕರೆ ಹಾಗೂ ಯಾರು ಮಾರಾಟ ಮಾಡಿರುತ್ತಾರೆ ನನಗೆ ಗೊತ್ತಿಲ್ಲ.

ಅದೇ ರೀತಿ ಗುರುಬಾಯಿ ಶಿವಶರಣಪ್ಪರವರಿಗೆ ಯಾವ ಸರ್ವೇ ನಂಬರ ಮತ್ತು ಎಷ್ಟು ಎಕರೆ ಹಾಗೂ ಯಾರು ಮಾರಾಟ ಮಾಡಿರುತ್ತಾರೆ ನನಗೆ ಗೊತ್ತಿಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಹಣಮಂತರಾವ ದೇಶಮುಖರವರಿಗೆ ಇಂತಿಷ್ಟು ಸಾಲ ಇತ್ತು ಎಂದು ನಾನು ಹೇಳಿ ಬರೆಸಿಲ್ಲ. ಅದೇ ರೀತಿ ಪಾಂಡುರಂಗ ದೇಶಮುಖರವರಿಗೆ ಇಂತಿಷ್ಟು ಸಾಲ ಇತ್ತು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿ ಬರೆಸಿಲ್ಲ. 4 ನೇ ಪ್ರತಿವಾದಿಗೆ ಮಾರಾಟ ಮಾಡಿದ ಜಮೀನು ನೀರಾವರಿ ಜಮೀನು ಇದೆ ಎಂದರೆ ಸರಿ. ಸದರಿ 4 ನೇ ಪ್ರತಿವಾದಿಗೆ ಮಾರಾಟ ಮಾಡಿದ ಜಮೀನದಲ್ಲಿ ಬಾವಿ ಮತ್ತು ಕೊಳವೆಬಾವಿ ಇರುತ್ತವೆ ಎಂದರೆ, ಸಾಕ್ಷಿ ಬಾವಿ ಇದೆ. ಕೊಳವೆ ಮುಚ್ಚಿ ಹೋಗಿವೆ ಎಂದು ನುಡಿಯುತ್ತಾರೆ. 4 ನೇ ಪ್ರತಿವಾದಿಗೆ ಮಾರಾಟ ಮಾಡಿದ 14 ಎಕರೆ ಜಮೀನಿದಲ್ಲಿ ಬಾಳೆ, ಕಬ್ಬು ಮತ್ತು ಎಲೆತೋಟ ಹಣಮಂತರಾವ ಕಾಲಕ್ಕೆ ಇತ್ತು ಎಂದರೆ ಸರಿ. ಹಣಮಂತರಾವ ಮರಣ ಹೊಂದಿದ ನಂತರ ಬಾಳೆ, ಕಬ್ಬು ಮತ್ತು ಎಲೆತೋಟ ಇದೆ ಎಂದರೆ ಸರಿ. ಈಗಲೂ ಕೂಡಾ ಸದರಿ ಭೂಮಿ ನೀರಾವರಿ ಜಮೀನು ಇದೆ ಎಂದರೆ ಸರಿ. ಸದರಿ 14 ಎಕರೆ ಜಮೀನಿನಿಂದ ವರ್ಷಕ್ಕೆ ಎಲ್ಲ ಖರ್ಚನ್ನು ಕಳೆದು ಸುಮಾರು 7-8 ಲಕ್ಷ ಉತ್ಪನ್ನ ಉಳಿಯುತ್ತಿತ್ತು ಎಂದರೆ ಸರಿ.

ಮೃತ ಪಾಂಡುರಂಗರಾವರು ನನಗೆ ಸರ್ವೇ ನಂಬರ 131 ರಲ್ಲಿ 4 ಎಕರೆ 37 ಗುಂಟೆಯನ್ನು ಅಡಮಾನ ಮಾಡಿಕೊಟ್ಟ ಜಮೀನಿಗೆ ನಾನು 6 ಲಕ್ಷ 80 ಸಾವಿರ ಹಣ ಕೊಟ್ಟಿರುತ್ತೇನೆ.

ಸದರಿ ಹಣವನ್ನು ನಾನು ಬ್ಯಾಂಕಿನಿಂದ ತೆಗೆದುಕೊಂಡಿಲ್ಲ, ನಗದು ರೂಪವಾಗಿ ಹೊಲ ಬೆಳೆದ ಉತ್ಪನ್ನದಿಂದ, ಬಡಗಿತನ ಮತ್ತು ಕಂಬಾರಿಕೆಯಿಂದ ಹಾಗೂ ಎತ್ತಿನ ಬಂಡಿ ಬಂದ ಉತ್ಪನ್ನದಿಂದ ಕೊಟ್ಟಿರುತ್ತೇನೆ. ನನ್ನ ಹೆಸರಿನಲ್ಲಿ ಜಮೀನು 3 ಎಕರೆ ಇರುತ್ತದೆ. ಆದರೆ ನನ್ನ ಕುಟುಂಬದವರ ಹೆಸರಿನಲ್ಲಿ ಒಟ್ಟಾಗಿ 18 ಎಕರೆ ಇರುತ್ತದೆ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಒಕ್ಕಲುತನ ಮಾತ್ರ ಮಾಡುತ್ತಿದ್ದೇನೆ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪಾಂಡುರಂಗರಾವರಿಗೆ ಸದರಿ 6 ಲಕ್ಷ 80 ಸಾವಿರ ಹಣವನ್ನು ಬಡ್ಡಿ ಮೇಲೆ ಕೊಟ್ಟಿಲ್ಲ. ನಾನು ಪಾಂಡುರಂಗರಾವರಿಗೆ 6 ಲಕ್ಷ 80 ಸಾವಿರ ಹಣವನ್ನು ದಿಃ28-06-2010 ರಂದು ಕೊಟ್ಟಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ನನಗೆ ಅಡಮಾನ ಮಾಡಿಕೊಟ್ಟ ಜಮೀನು ಸರ್ವೆ ನಂಬರ 131 ಪಾಂಡುರಂಗರವರ ಹಿರಿಯರ ಆಸ್ತಿ ಎಂದರೆ ಸರಿ. ಹಣಮಂತರಾವರ 7 ಜನ ಹೆಣ್ಣು ಮಕ್ಕಳು ತಮಗೆ ತಮ್ಮ ತಂದೆ ಆಸ್ತಿಯಲ್ಲಿ ಪಾಲು ಬೇಕು ಎಂದು ಇದೇ ನ್ಯಾಯಾಲಯದಲ್ಲಿ ಕೇಸು ಹಾಕಿದ್ದಾರೆ ಎಂದರೆ ಸರಿ. ಸದರಿ ಕೇಸಿನಲ್ಲಿ ನಾನು ಕೂಡಾ ಪಾರ್ಟಿ ಇದ್ದೇನೆ ಎಂದರೆ ಸರಿ. ನಾನು ಕೂಡಾ ಅವರ ಮೇಲೆ ಒಂದು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ದಿಃ28-06-2010 ರಂದು ಆದ ಅಡಮಾನ ಪತ್ರಕ್ಕೆ ವಾದಿಯರ ಸಹಿ ಇಲ್ಲ ಎಂದರೆ ಸರಿ.

**D.W-2**

ಅದೇ ರೀತಿ ಪಾಂಡುರಂಗರಾವರ ಹೆಂಡತಿ ಮತ್ತು ಮಕ್ಕಳು ಸಹಿ ಅಡಮಾನ ಪತ್ರಕ್ಕೆ ಇಲ್ಲ ಎಂದರೆ ಸರಿ. ಪಾಂಡುರಂಗರಾವರು ತಮಗೆ ಯಾವುದೇ ಕುಟುಂಬದ ಅಡಚಣೆ ಸಲುವಾಗಿ ನನಗೆ ದಿಃ28-06-2010 ರಂದು ಅಡಮಾನ ಪತ್ರ ಮಾಡಿಕೊಟ್ಟಿರುವುದಿಲ್ಲ ಹಾಗೂ ಹಣ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣ ಸದರಿ ಪಾಂಡುರಂಗರವರು ನನಗೆ ಮಾಡಿಕೊಟ್ಟ ಅಡಮಾನ ಪತ್ರಕ್ಕೆ ವಾದಿಯರು ಸಂಬಂಧಪಡುವುದಿಲ್ಲ. ಆತನ ಹೆಂಡತಿ ಮತ್ತು ಮಕ್ಕಳು ಮಾತ್ರ ಸಂಬಂಧಪಡುತ್ತಾರೆ ಎಂದರೆ ಸರಿ. ಸದರಿ ಪಾಂಡುರಂಗರಾವರಿಗೆ ನನಗೆ ಅಡಮಾನ ಮಾಡಿಕೊಡಲು ಅವರಿಗೆ ಯಾವುದೇ ಅಧಿಕಾರ ಇದ್ದಿರಲಿಲ್ಲ ಎಂದರೆ ಸರಿ.

ನಿಡಿ-29 ನನ್ನ ತಮ್ಮನ ಹೆಸರಿನಲ್ಲಿ ಇದೆ. ನಿಡಿ-29 ರ ಕ್ರಯಪತ್ರವನ್ನು ವಾದಿಯರ ತಂದೆಯಾದ ಹಣಮಂತರಾವರು ನನ್ನ ತಮ್ಮ ಶಾಂತಪ್ಪನಿಗೆ ದಿಃ25-03-2006 ರಂದು ವಾದಿಯರಿಗೆ ಗೊತ್ತಿರದೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ನಿಡಿ-29 ಕ್ಕೆ ವಾದಿಯರ ಸಹಿ ಇಲ್ಲ ಎಂದರೆ ಸರಿ. ಸದರಿ ನಿಡಿ-29 ರ ಜಮೀನನ್ನು ಹಣಮಂತರಾವರು ಯಾವುದೇ ಅಡಚಣೆ ಇಲ್ಲದೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹಣಮಂತರಾವರಿಗೆ ನಿಡಿ-29 ರ ಖರೀದಿ ಪತ್ರ ಮಾಡಿಕೊಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ-30 ರಿಂದ 33 ರ ದಾಖಲೆಯನ್ನು ನನ್ನ ಕುಟುಂಬಕ್ಕೆ ಜಮೀನು ಇದೆ ಎಂದು ತೋರಿಸಲು ಸಲುವಾಗಿ ಹಾಜರುಪಡಿಸಿರುತ್ತೇನೆ.

**OS. No.18/2016**
**D.W-2**

ನಾನು ಮತ್ತು ನನ್ನ ತಮ್ಮ ಶಾಂತಪ್ಪ ಇವತ್ತಿನವರೆಗೂ ಕೂಡಿ ಇರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಹುಲ್ಲ. 4-5 ವರ್ಷಗಳಿಂದ ನಾವು ಬೇರೆ ಇರುತ್ತೇವೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**